ಕಾಗದವೊಂದು ಕಂಡಿತು. ಏನೋ ಯೋಚಿಸಿದವನಂತೆ ಆತ ಹೇಳಿದ,

"ಒಡೆಯದ ಲಕೋಟೆ! ಹಾಂ, ನೀವು ಈ ಲಕೋಟೆಯನ್ನು ಆತನ ಮನೆಯೊಳಗೆ ಹಾಕಿ."

"ಇನ್ನೊಂದು ವಿಚಾರ ಹೇಳೋಕೆ ಮರೆತಿದ್ದೆ. ಆತ ಎರಡು ಬಾರಿ ಕೆಲವು ದಿನಗಳ ಕಾಲ ನಾಪತ್ತೆಯಾಗಿದ್ದ. ಆವಾಗ ಊಟ ಬೇಡ ಎಂದು ಹೇಳಿ ಹೋಗಿದ್ದ. ಈ ಬಾರಿ ಮಾತ್ರ ಏನೂ ಹೇಳದೇ ಪರಾರಿಯಾಗಿದ್ದಾನೆ. ಆದ್ರೆ ನನ್ನ ಬಳಿ ಮುಂಗಡ ತೆಗೆದುಕೊಂಡ ಬಾಡಿಗೆ ಇದೆ. ಹಾಗಾಗಿ ಚಿಂತೆಯಿಲ್ಲ. ನಾನೀಗ ಪೊಲೀಸರಲ್ಲಿ ಈ ವಿಷ್ಯ ತಿಳಿಸಬೇಕೇ?"

"ಪೊಲೀಸರಿಗೆ ಸದ್ಯಕ್ಕೆ ಬೇಡ. ಆದ್ರೆ ಮುಂದೆ ತಿಳಿಸಬೇಕಾಗಬಹುದು. ಹೊನ್ನರಾಜು, ನೀವು ನಾನು ಹೇಳಿದಂತೆ ಮಾಡಿ. ನಾಳೆ ಸಂಜೆ ನಾನು ನಿಮ್ಮಲ್ಲಿಗೆ ಬರ್ತೇನೆ. ಅಂದ ಹಾಗೆ, ಸಂಪಂಗಿ ಬಾಡಿಗೆ ಸರಿಯಾಗಿ ಪಾವತಿ ಮಾಡ್ತಿದ್ದನಾ?"

"ಆ ವಿಷ್ಯದಲ್ಲಿ ಆತ ಬಹಳ ಶಿಸ್ತಿನವ. ಸರಿಯಾಗಿ ಒಂದನೇ ತಾರೀಖಿಗೆ ಎರಡು ಸಾವಿರದ ಆರು ಹೊಸ ನೋಟುಗಳನ್ನು ಕೊಡ್ತಾ ಇದ್ದ. ಸರಿ, ನಾನಿನ್ನು ಹೊರಡ್ತೀನಿ"

ಹೊನ್ನರಾಜು ಮೆಲ್ಲನೆ ಎದ್ದ.

★★★

ಮರುದಿನ ಸಂಜೆ ನಾವು ಕುಟ್ಟ ತಲಪುವಾಗ ಗಂಟೆ ನಾಲ್ಕು ದಾಟಿತ್ತು. ಆಗಲೇ ಆಕಾಶದಲ್ಲಿ ಮೋಡಗಳು ದಟ್ಟೈಸಿದ್ದವು. ಯಾವುದೇ ಕ್ಷಣಕ್ಕೂ ಮಳೆ ಸುರಿಯುವಂತಿತ್ತು. ಹೊನ್ನರಾಜು ನಮಗಾಗಿ ಮುಖ್ಯ ರಸ್ತೆಯಲ್ಲಿ ಕಾಯುತ್ತಲ್ಲಿದ್ದ. ನಾವು ಅಲ್ಲಿಯೇ ಕಾರು ನಿಲ್ಲಿಸಿ, ಕಾಲು ನಡಿಗೆಯಲ್ಲಿ ಹೊರಟೆವು. ಇಳಿಜಾರಾದ ಮಣ್ಣಿನ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿರಲಿಲ್ಲ. ಸುಮಾರು ಅರ್ಧ ತಾಸಿನಲ್ಲಿ ನಾವು ಎಸ್ಟೇಟಿನ ಗೇಟನ್ನು ತಲುಪಿದೆವು. ಬಿಳಿಗಿರಿ ಎಸ್ಟೇಟ್ ಎನ್ನುವ ಹಳೆಯ ಫಲಕ ಕಂಬದಲ್ಲಿ ನೇತಾಡುತ್ತಿತ್ತು. ಮತ್ತೆ ಹತ್ತು ನಿಮಿಷಗಳಲ್ಲಿ ನಾವು ದೊಡ್ಡದಾದ ಹಳೆಯ ಮನೆಯ ಅಂಗಳ ತಲುಪಿದೆವು. ಹೂತೋಟದಲ್ಲಿ ಕೆಲಸ ಮಾಡುತ್ತಿದ್ದ ಕಟ್ಟುಮಸ್ತಾದ ಶರೀರದ ವ್ಯಕ್ತಿಯೊಬ್ಬ ನಮ್ಮನ್ನು ಕಂಡು, ಅಂಗಳಕ್ಕೆ ಬಂದ. ಆತನ ಕಣ್ಣುಗಳಲ್ಲಿ ಇರಿಯುವ ನೋಟವಿತ್ತು.

"ಇವ್ನೇ ಮುತ್ತಪ್ಪ. ನನ್ನ ನಂಬಿಗಸ್ಥ ಆಳು. ಅಡುಗೆ ಮಾಡಲಿಕ್ಕೆ ಮತ್ತು ಇತರ ಕೆಲ್ಸಗಳಿಗೆ ಓಂಕಾರಪ್ಪ ಮತ್ತು ಅವ್ನ ಹೆಂಡ್ತಿ ಬೊಳ್ಳಮ್ಮ ಇದ್ದಾರೆ. ಮನೇಲಿ ನಾವಿಷ್ಟೇ ಜನ ಇರೋದು. ಮುತ್ತಪ್ಪ, ಬೊಳ್ಳಮ್ಮನಿಗೆ ಕಾಫಿ ತಯಾರು ಮಾಡ್ಲು ಹೇಳು. ಬನ್ನಿ, ಸಂಪಂಗಿ ಇರುವ ಮನೆ ತೋರಿಸ್ತೀನಿ."

ನಾವು ಎಡಭಾಗದ ಕಿರು ದಾರಿಯಲ್ಲಿ ತುಸು ದೂರ ಸಾಗಿದೆವು. ಹೊನ್ನರಾಜುವಿನ ಕೈತೋಟ ಅಷ್ಟೇನೂ ಸುಸ್ಥಿತಿಯಲ್ಲಿ ಇರಲಿಲ್ಲ. ಆದರೆ ಎಲ್ಲೆಡೆ ಹಸಿರು ತುಂಬಿತ್ತು. ಕಲ್ಲುಗಳಿಂದ ಓರೆಕೋರೆಯಾಗಿ ಕಟ್ಟಿದ್ದ ಪಾಗಾರಕ್ಕೆ ಒತ್ತಿಕೊಂಡು ದಟ್ಟವಾದ ಮರಗಳ ಸಮುದಾಯ. ಅದು ನಾಗರಹೊಳೆ ಕಾಡು ಪ್ರದೇಶದ ಭಾಗ. ಹೊನ್ನರಾಜುವಿನ ಮನೆಯ ಹಿಂಭಾಗದಲ್ಲಿ ತುಸು ಎಡ ಭಾಗದಲ್ಲಿ ಹಳೆಯ ಹೆಂಚಿನ ಕಟ್ಟಡವಿತ್ತು. ಬಾಗಿಲಿಗೆ ದಪ್ಪ ಬೀಗ ಹಾಕಲಾಗಿತ್ತು.

"ಇದೇ ಸಂಪಂಗಿ ಇರುವ ಮನೆ. ಎರಡು ಕೋಣೆ, ಕಿಚನ್, ಬಾತ್ ರೂಮು ಮತ್ತು ಟಾಯ್ಲೆಟ್ ಇದೆ. ತೀರಾ ಸಣ್ಣದಾದ ಮನೆ. ಸುಮ್ಮನೆ ಪಾಳು ಬಿದ್ದಿತ್ತು. ಇಲ್ಲಿಗೆ ಬಾಡಿಗೆಗೆ ಯಾರು ಬರ್ತಾರೆ ಹೇಳಿ. ಮೊದ್ಲು ಕೆಲ್ಸದವರು ಇರ್ತಿದ್ದರು. ಈ ಮನೆಯನ್ನು ಹೇಗೋ ಪತ್ತೆ ಮಾಡಿ ಸಂಪಂಗಿ ಇಲ್ಲಿಗೆ ಬಂದಿದ್ದ. ಈ ಮನೆಗೆ ತಿಂಗಳಿಗೆ ಹತ್ತು ಸಾವಿರ ಕೊಡ್ತಿದಾನೆ. ಅಷ್ಟು ಹಣ